# ಕ.ವಿ.ಪ್ರ.ನಿ.ನಿ. ಮತ್ತು ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್

# KPTCL AND ESCOMs PENSION AND GRATUITY TRUSTS

Ph No. 080-22291150
Fax No. 080-22223558
E-mail: pgtrustkptcl@gmail.com

6ನೇ ಮಹಡಿ,
ಕಾವೇರಿ ಭವನ,
ಬೆಂಗಳೂರು – 560 009.


ಸಂಖ್ಯೆ. ಕೆಇಪಿಜಿಟಿ/ಕೆಸಿಒ123/ಪಿ19/2018–19/CYS-05

ದಿನಾಂಕ 09 JUL 2018

## ಸುತ್ತೋಲೆ

ವಿಷಯ: ದಿನಾಂಕ 01.07.2017 ರಿಂದ ಜಾರಿಗೆ ಬರುವಂತೆ ಪುನರ್ ವಿಮರ್ಶಿತ ಪಿಂಚಣಿ/ ಕುಟುಂಬ ಪಿಂಚಣಿ ನಿಗದಿಪಡಿಸುವಾಗ ಅನುಸರಿಸಬೇಕಾದ ಅಂಶಗಳ ಕುರಿತು.

ಉಲ್ಲೇಖ:
1. ನಿಗಮದ ಆದೇಶ ಸಂಖ್ಯೆ. ಕವಿಪ್ರನಿನಿ/ಬಿ16/69518/2017–18 ದಿನಾಂಕ 09.03.2018.
2. ನಿಗಮದ ಆದೇಶ ಸಂಖ್ಯೆ. ಕವಿಪ್ರನಿನಿ/ಬಿ16/18239/2010–11 ದಿನಾಂಕ 12.05.2011.
3. ಆರ್ಥಿಕ ಸಲಹೆಗಾರರು(ಲೆ & ಸಂ)ರವರ ಸುತ್ತೋಲೆ ಸಂಖ್ಯೆ. ಕೆಸಿಒ01/39724 ದಿನಾಂಕ 22.09.2012.
4. ಈ ಕಛೇರಿ ಸುತ್ತೋಲೆ ಸಂಖ್ಯೆ. ಕೆಇಪಿಜಿಟಿ/ಕೆಸಿಒ123/ಪಿ19/2018–19/ಸಿವೈಎಸ್–1 ದಿನಾಂಕ 11.04.2018.
5. ನಿಗಮದ ಆದೇಶ ಸಂಖ್ಯೆ. ಕವಿಪ್ರನಿನಿ/ಬಿ16/3610/2003–04 ದಿನಾಂಕ 21.06.2018.
6. ನಿಗಮದ ಆದೇಶ ಸಂಖ್ಯೆ. ಕವಿಪ್ರನಿನಿ/ಬಿ16/69518/2017–18 ದಿನಾಂಕ 29.06.2018.

***********

ಉಲ್ಲೇಖ–1 ಆದೇಶದಲ್ಲಿ 31.03.2017ರಲ್ಲಿದ್ದಂತೆ ಪಿಂಚಣಿ/ಕುಟುಂಬ ಪಿಂಚಣಿದಾರರ ಪಿಂಚಣಿ/ಕುಟುಂಬ ಪಿಂಚಣಿಯನ್ನು ಹಾಗೂ ದಿನಾಂಕ 01.04.2017ರ ನಂತರ ನಿವೃತ್ತಿಯಾಗುತ್ತಿರುವ/ನಿವೃತ್ತಿ ನಂತರ ನಿಧನರಾಗುವ/ ಸೇವೆಯಲ್ಲಿರುವಾಗಲೇ ನಿಧನರಾಗುವ ಸಿಬ್ಬಂದಿಗಳ ನಿವೃತ್ತಿ ಸೌಲಭ್ಯಗಳನ್ನು ಪರಿಷ್ಕರಿಸಲಾಗಿರುತ್ತದೆ.

ಉಲ್ಲೇಖ–4ರ ಸುತ್ತೋಲೆಯಲ್ಲಿ ಪುನರ್ ವಿಮರ್ಶಿತ ಪಿಂಚಣಿ/ಕುಟುಂಬ ಪಿಂಚಣಿ ನಿಗದಿಪಡಿಸುವಾಗ ಅನುಸರಿಸಬೇಕಾದ ಅಂಶಗಳ ಕುರಿತು ತಿಳಿಸಲಾಗಿರುತ್ತದೆ. ಉಲ್ಲೇಖ–5ರ ಆದೇಶದಲ್ಲಿ ದಿನಾಂಕ 01.07.2017 ರಿಂದ ಜಾರಿಗೆ ಬರುವಂತೆ ದಿನಾಂಕ 01.07.2017ರಲ್ಲಿದ್ದಂತ ತುಟ್ಟಿಭತ್ಯೆ 45.25%ನ್ನು ವಿಲೀನಗೊಳಿಸಿ ಪಿಂಚಣಿ/ಕುಟುಂಬ ಪಿಂಚಣಿ/ನಿವೃತ್ತಿ ಸೌಲಭ್ಯಗಳನ್ನು ಪರಿಷ್ಕರಿಸಲಾಗಿರುತ್ತದೆ. ಈ ಆದೇಶದನುಸಾರ ಪಿಂಚಣಿ/ಕುಟುಂಬ ಪಿಂಚಣಿ ನಿಗದಿಪಡಿಸುವಾಗ ಸಂದೇಹ/ಸ್ಪಷ್ಟೀಕರಣಗಳನ್ನು ಪಿಂಚಣಿ ಬಟವಾಡೆ ಲೆಕ್ಕಘಟಕಗಳ ಅಧಿಕಾರಿ/ಸಿಬ್ಬಂದಿಗಳು ಟ್ರಸ್ಟ್ ಕಛೇರಿಗೆ ಸಂಪರ್ಕಿಸುತ್ತಿರುವುದನ್ನು ಗಮನಿಸಲಾಗಿದೆ. ಆದ್ದರಿಂದ, ಸಿಬ್ಬಂದಿ/ಅಧಿಕಾರಿಗಳ ಅನುಕೂಲಕ್ಕಾಗಿ ಈ ಕೆಳಗಿನಂತೆ ಉದಾಹರಣೆಗಳನ್ನು ನೀಡಲಾಗಿದೆ.

1. **ದಿನಾಂಕ 01.04.2017ಕ್ಕಿಂತ ಹಿಂದಿನ ಪಿಂಚಣಿ/ಕುಟುಂಬ ಪಿಂಚಣಿದಾರರ ಪಿಂಚಣಿ ಮತ್ತು ಕುಟುಂಬ ಪಿಂಚಣಿ ನಿಗದಿಪಡಿಸುವಿಕೆ:**

(₹ ಗಳಲ್ಲಿ)

| | | |
|---|---|---|
| ಅ | ಮೂಲ ಪಿಂಚಣಿ/ಕುಟುಂಬ ಪಿಂಚಣಿ ದಿನಾಂಕ 31.03.2017ಕ್ಕೆ | 4,800 |
| ಆ | ದಿನಾಂಕ 01.04.2017 ರಿಂದ ಜಾರಿಗೆ ಬರುವಂತೆ ಪರಿಷ್ಕೃತ ಮೂಲ ಪಿಂಚಣಿ/ ಕುಟುಂಬ ಪಿಂಚಣಿ ಆದೇಶ ಸಂಖ್ಯೆ ಕವಿಪ್ರನಿನಿ/ಬಿ16/69518/2017–18 ದಿನಾಂಕ 09.03.2018ರ ಪ್ರಕಾರ ಉಂಟಾದ ಹೆಚ್ಚಳ (₹ 4,800x26%) | 1,248 |
| ಇ | ಪರಿಷ್ಕೃತ ಪಿಂಚಣಿ/ಕುಟುಂಬ ಪಿಂಚಣಿ | 6,048 |
| ಈ | ದಿನಾಂಕ 01.07.2017 ರಿಂದ ಜಾರಿಗೆ ಬರುವಂತೆ ಪರಿಷ್ಕೃತ ಮೂಲ ಪಿಂಚಣಿ/ ಕುಟುಂಬ ಪಿಂಚಣಿ ಆದೇಶ ಸಂಖ್ಯೆ ಕವಿಪ್ರನಿನಿ/ಬಿ16/69518/2017–18 ದಿನಾಂಕ 29.06.2018ರ ಪ್ರಕಾರ ವಿಲೀನಗೊಳಿಸಬೇಕಾದ ತುಟ್ಟಿಭತ್ಯೆ (₹ 6,048x45.25%) | 2,737 |
| ಉ | ಕಾಲಾನುಕಾಲಕ್ಕೆ ತುಟ್ಟಿಭತ್ಯೆ ಲೆಕ್ಕಹಾಕುವ ಮೂಲ ಪಿಂಚಣಿ/ಕುಟುಂಬ ಪಿಂಚಣಿ 01.07.2017ಕ್ಕೆ | 8,785 |

ಈ ರೀತಿ ಕ್ರಮವಾಗಿ ಪಿಂಚಣಿ/ಕುಟುಂಬ ಪಿಂಚಣಿ ಮೊತ್ತ ಪ್ರತಿ ತಿಂಗಳು ಕನಿಷ್ಠ ₹ 8,785/– ಗಳಿಗೆ ಕಡಿಮೆಯಾಗದಂತೆ, ಗರಿಷ್ಠ ಕುಟುಂಬ ಪಿಂಚಣಿ ಪ್ರತಿ ತಿಂಗಳು ₹ 43,815/–ಗಳಿಗೆ ಮೀರದಂತೆ ಹಾಗೂ ಗರಿಷ್ಠ ಪಿಂಚಣಿ ಪ್ರತಿ ತಿಂಗಳು ₹ 73,023/–ಗಳಿಗೆ ಮೀರದಂತೆ ಪರಿಷ್ಕರಿಸಿ, ಪರಿಷ್ಕೃತ ಪಿಂಚಣಿ/ಕುಟುಂಬ ಪಿಂಚಣಿಯನ್ನು ಆಂತರಿಕ ಪರಿಶೋಧನೆಗೆ ಒಳಪಡಿಸಿ ನಿಗದಿಪಡಿಸಲು ಕ್ರಮ ಕೈಗೊಳ್ಳುವುದು. ಪಿಂಚಣಿ/ ಕುಟುಂಬ ಪಿಂಚಣಿ ಆದೇಶದ ಎರಡೂ ಭಾಗಗಳಲ್ಲಿ (Pensioner/ Office copy) ಸಂಬಂಧಪಟ್ಟ ಅಧಿಕಾರಿಗಳು ಮತ್ತು ಲೆಕ್ಕಪರಿಶೋಧನೆ ಅಧಿಕಾರಿಗಳು ದೃಢೀಕರಿಸಿ, ಮೇಲ್ಮುದ್ರೆ (Enfacement) ಯೊಂದಿಗೆ ನಮೂದಿಸುವುದು.

ಈ ಪ್ರಕಾರ ಪಿಂಚಣಿ/ಕುಟುಂಬ ಪಿಂಚಣಿಯನ್ನು ನಿಗದಿಪಡಿಸಿದ ನಂತರ ಪರಿಷ್ಕೃತ ಪಿಂಚಣಿ/ ಕುಟುಂಬ ಪಿಂಚಣಿಯನ್ನು ಪಿಂಚಣಿ ಸ್ಕೇಲ್ ರಿಜಿಸ್ಟರ್ ಹಾಗೂ Pension Payment Management System ತಂತ್ರಾಂಶದಲ್ಲಿ ನಮೂದಿಸುವುದು.

2. **ದಿನಾಂಕ 01.04.2017 ರಿಂದ 30.06.2017ರ ಅವಧಿಯಲ್ಲಿ ನಿವೃತ್ತಿಯಾದ/ನಿಧನಗೊಂಡ ಸಿಬ್ಬಂದಿಗಳ ಪಿಂಚಣಿ ಮತ್ತು ಕುಟುಂಬ ಪಿಂಚಣಿ ನಿಗದಿಪಡಿಸುವಿಕೆ:**

ಇಂತಹ ಪ್ರಕರಣಗಳಲ್ಲಿ ದಿನಾಂಕ 01.04.2017 ರಿಂದ ಜಾರಿಗೆ ಬರುವಂತೆ ಪರಿಷ್ಕೃತ ವೇತನ ಶ್ರೇಣಿಯಲ್ಲಿ ವೇತನ ನಿಗದಿ ಮಾಡಿದ ನಂತರ ಸಕ್ಷಮ ಪಿಂಚಣಿ ಅಧೀಕರಿಸುವ ಪ್ರಾಧಿಕಾರವು (ಕವಿಪ್ರನಿನಿ/ವಿಸಕಂಗಳ ಆರ್ಥಿಕ ಸಲಹೆಗಾರರು) ಪಿಂಚಣಿ ಅಧೀಕರಿಸಿದ ತರುವಾಯ ಪಿಂಚಣಿ/ ಕುಟುಂಬ ಪಿಂಚಣಿಯನ್ನು ಈ ನಿಗದಿಪಡಿಸಲು ಕ್ರಮ ಕೈಗೊಳ್ಳುವುದು.

(₹ ಗಳಲ್ಲಿ)

| | | |
|---|---|---|
| ಅ | ದಿನಾಂಕ 09.03.2018ರ ಆದೇಶದಂತೆ ಪರಿಷ್ಕೃತ ವೇತನದ ಆಧಾರದ ಮೇಲೆ ನಿಗದಿಪಡಿಸಿದ ಪಿಂಚಣಿ/ಕುಟುಂಬ ಪಿಂಚಣಿ ದಿನಾಂಕ 30.06.2017ಕ್ಕೆ | 8,185 |
| ಆ | ದಿನಾಂಕ 01.07.2017 ರಿಂದ ಜಾರಿಗೆ ಬರುವಂತೆ ಪರಿಷ್ಕೃತ ಮೂಲ ಪಿಂಚಣಿ/ ಕುಟುಂಬ ಪಿಂಚಣಿ ಆದೇಶ ಸಂಖ್ಯೆ ಕವಿಪ್ರನಿನಿ/ಬಿ16/69518/2017–18 ದಿನಾಂಕ 29.06.2018ರ ಪ್ರಕಾರ ವಿಲೀನಗೊಳಿಸಬೇಕಾದ ತುಟ್ಟಿಭತ್ಯೆ (₹ 8,185x45.25%) | 3,704 |
| ಇ | ಕಾಲಾನುಕಾಲಕ್ಕೆ ತುಟ್ಟಿಭತ್ಯೆ ಲೆಕ್ಕಹಾಕುವ ಮೂಲ ಪಿಂಚಣಿ/ಕುಟುಂಬ ಪಿಂಚಣಿ 01.07.2017ಕ್ಕೆ | 11,889 |

ಈ ರೀತಿ ಕ್ರಮವಾಗಿ ಪಿಂಚಣಿ/ಕುಟುಂಬ ಪಿಂಚಣಿ ಮೊತ್ತ ಪ್ರತಿ ತಿಂಗಳು ಕನಿಷ್ಠ ₹ 11,889/– ಗಳಿಗೆ ಕಡಿಮೆಯಾಗದಂತೆ, ಗರಿಷ್ಠ ಕುಟುಂಬ ಪಿಂಚಣಿ ಪ್ರತಿ ತಿಂಗಳು ₹ 53,267/–ಗಳಿಗೆ ಮೀರದಂತೆ ಹಾಗೂ ಗರಿಷ್ಠ ಪಿಂಚಣಿ ಪ್ರತಿ ತಿಂಗಳು ₹ 88,777/–ಗಳಿಗೆ ಮೀರದಂತೆ ಪರಿಷ್ಕರಿಸಿ, ಪರಿಷ್ಕೃತ ಪಿಂಚಣಿ/ಕುಟುಂಬ ಪಿಂಚಣಿಯನ್ನು ಆಂತರಿಕ ಪರಿಶೋಧನೆಗೆ ಒಳಪಡಿಸಿ ನಿಗದಿಪಡಿಸಲು ಕ್ರಮ ಕೈಗೊಳ್ಳುವುದು. ಪಿಂಚಣಿ/ ಕುಟುಂಬ ಪಿಂಚಣಿ ಆದೇಶದ ಎರಡೂ ಭಾಗಗಳಲ್ಲಿ (Pensioner/Office copy) ಸಂಬಂಧಪಟ್ಟ ಅಧಿಕಾರಿಗಳು ಮತ್ತು ಲೆಕ್ಕಪರಿಶೋಧನೆ ಅಧಿಕಾರಿಗಳು ದೃಢೀಕರಿಸಿ, ಮೇಲ್ಮುದ್ರೆ (Enfacement) ಯೊಂದಿಗೆ ನಮೂದಿಸುವುದು.

ಈ ಪ್ರಕಾರ ಪಿಂಚಣಿ/ಕುಟುಂಬ ಪಿಂಚಣಿಯನ್ನು ನಿಗದಿಪಡಿಸಿದ ನಂತರ ಪರಿಷ್ಕೃತ ಪಿಂಚಣಿ/ ಕುಟುಂಬ ಪಿಂಚಣಿಯನ್ನು ಪಿಂಚಣಿ ಸ್ಕೇಲ್ ರಿಜಿಸ್ಟರ್ ಹಾಗೂ Pension Payment Management System ತಂತ್ರಾಂಶದಲ್ಲಿ ನಮೂದಿಸುವುದು.

3. **ದಿನಾಂಕ 01.07.2017ರ ನಂತರ ನಿವೃತ್ತಿಯಾಗುವ/ನಿವೃತ್ತಿ ನಂತರ ನಿಧನರಾಗುವ/ ಸೇವೆಯಲ್ಲಿರುವಾಗಲೇ ನಿಧನರಾಗುವ ಸಿಬ್ಬಂದಿಗಳ ನಿವೃತ್ತಿ ಸೌಲಭ್ಯಗಳ ಪರಿಷ್ಕರಣೆ:**

ಉಲ್ಲೇಖ–5ರ ಆದೇಶದಲ್ಲಿ ದಿನಾಂಕ 01.07.2017 ರಿಂದ ಜಾರಿಗೆ ಬರುವಂತೆ 45.25% ತುಟ್ಟಿಭತ್ಯೆಯನ್ನು ಡಿಯರ್‌ನೆಸ್ ಪೇ ಎಂದು ಪರಿಗಣಿಸುವಂತೆ ಆದೇಶಿಸಲಾಗಿದೆ. ಉಲ್ಲೇಖ–6ರ ಆದೇಶದನುಸಾರ 45.25% ಡಿಯರ್‌ನೆಸ್ ಪೇ ಅಂಶವನ್ನು ಮೂಲವೇತನದ ಒಂದು ಭಾಗವಾಗಿ ಪರಿಗಣಿಸಿ (Emoluments) ನಿವೃತ್ತಿ ಉಪಲಬ್ಧಗಳ ಲೆಕ್ಕಾಚಾರಕ್ಕೆ ಪರಿಗಣಿಸಬೇಕಿರುತ್ತದೆ. ಆದ್ದರಿಂದ, ದಿನಾಂಕ 01.07.2017ರ ನಂತರ ನಿವೃತ್ತಿಯಾಗುವ/ನಿವೃತ್ತಿ ನಂತರ ನಿಧನರಾಗುವ/ ಸೇವೆಯಲ್ಲಿರುವಾಗಲೇ ನಿಧನರಾಗುವ ಸಿಬ್ಬಂದಿಗಳ ಪರಿಷ್ಕೃತ ವೇತನ ಶ್ರೇಣಿಯಲ್ಲಿ ವೇತನ ನಿಗದಿ ಆಧಾರದ ಮೇಲೆ ನಿವೃತ್ತಿ ಸೌಲಭ್ಯಗಳ ಪರಿಷ್ಕರಣೆಯನ್ನು ಸಕ್ಷಮ ಪಿಂಚಣಿ ಅಧೀಕರಿಸುವ ಪ್ರಾಧಿಕಾರವು (ಕವಿಪ್ರನಿನಿ/ವಿಸಕಂಗಳ ಆರ್ಥಿಕ ಸಲಹೆಗಾರರು) ಪಿಂಚಣಿ ಅಧೀಕರಿಸಿದ ತರುವಾಯವಷ್ಟೇ ಪಾವತಿ ಮಾಡಬೇಕಿರುತ್ತದೆ.

ಒಂದು ವೇಳೆ 45.25% ಡಿಯರ್‌ನೆಸ್ ಪೇ ಅಂಶವನ್ನು ಪರಿಗಣಿಸದೇ ಪಿಂಚಣಿ/ಕುಟುಂಬ ಪಿಂಚಣಿ ಪರಿಷ್ಕರಣೆ/ಮಂಜೂರಾತಿಯಾದ ಪಕ್ಷದಲ್ಲಿ ಸಕ್ಷಮ ಪಿಂಚಣಿ ಅಧೀಕರಿಸುವ ಪ್ರಾಧಿಕಾರದಿಂದ ಮರು ಅಧೀಕರಿಸಿದ ತರುವಾಯವಷ್ಟೇ ಪಿಂಚಣಿ/ಕುಟುಂಬ ಪಿಂಚಣಿ, ಪರಿವರ್ತಿತ ಪಿಂಚಣಿ ಮತ್ತು ನಿವೃತ್ತಿ/ಮರಣ ಉಪದಾನವನ್ನು ಪಾವತಿ ಮಾಡಲು ಕ್ರಮ ಕೈಗೊಳ್ಳುವುದು.

4. **80, 85 ಮತ್ತು 90 ವರ್ಷ ದಾಟಿದ ಪಿಂಚಣಿ/ಕುಟುಂಬ ಪಿಂಚಣಿದಾರರಿಗೆ ಹೆಚ್ಚುವರಿ ಪಿಂಚಣಿ/ಕುಟುಂಬ ಪಿಂಚಣಿ ನಿಗದಿಪಡಿಸುವ ಕುರಿತು:**

ಉಲ್ಲೇಖ-2ರ ಆದೇಶದಲ್ಲಿ ದಿನಾಂಕ 01.07.1993ಕ್ಕಿಂತ ಮುಂಚಿತವಾಗಿ ನಿವೃತ್ತರಾದ ಅಥವಾ ಸೇವೆಯಲ್ಲಿರುವಾಗಲೇ ಮೃತರಾದ ನೌಕರರ ಪ್ರಕರಣಗಳಲ್ಲಿ ದಿನಾಂಕ 01.04.2006ರಿಂದ ಜಾರಿಗೆ ಬರುವಂತೆ, 80 ವರ್ಷ ದಾಟಿದವರಿಗೆ 20%ರಷ್ಟು, 85 ವರ್ಷ ದಾಟಿದವರಿಗೆ 30%ರಷ್ಟು ಮತ್ತು 90 ವರ್ಷ ದಾಟಿದವರಿಗೆ 50%ರಷ್ಟು ಮೂಲ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನ ಹೆಚ್ಚಿಸಲು ಅನುಮೋದಿಸಲಾಗಿರುತ್ತದೆ.

ಮುಂದುವರೆದು, ಉಲ್ಲೇಖ-3ರ ಸುತ್ತೋಲೆಯಲ್ಲಿ ಈ ರೀತಿ ಉಂಟಾದ ನಿವೃತ್ತಿ ಪಿಂಚಣಿ/ಕುಟುಂಬ ಪಿಂಚಣಿಯ ಹೆಚ್ಚಳವನ್ನು ಪ್ರತ್ಯೇಕ ಅಂಶವಾಗಿ ಮುಂದುವರೆಸಲು ಸೂಚಿಸಲಾಗಿರುತ್ತದೆ (Distinct Element).

ಮೇಲಿನ ಹಿನ್ನೆಲೆಯಲ್ಲಿ, ದಿನಾಂಕ 01.04.2017 ರಿಂದ ಜಾರಿಗೆ ಬರುವಂತೆ ಪಿಂಚಣಿ/ಕುಟುಂಬ ಪಿಂಚಣಿಯನ್ನು ದಿನಾಂಕ 31.03.2017ರಲ್ಲಿದ್ದಂತೆ ಮೂಲ ಪಿಂಚಣಿ/ಕುಟುಂಬ ಪಿಂಚಣಿಯನ್ನು ಉಲ್ಲೇಖ-1ರ ಆದೇಶದನುಸಾರ ಪರಿಷ್ಕರಿಸಿ, ತದನಂತರ, ಉಲ್ಲೇಖ-6ರ ಆದೇಶದನುಸಾರ ದಿನಾಂಕ 01.07.2017 ರಿಂದ ಜಾರಿಗೆ ಬರುವಂತೆ ದಿನಾಂಕ 01.07.2017ರಲ್ಲಿದ್ದಂತೆ ತುಟ್ಟಿಭತ್ಯೆ 45.25%ನ್ನು ವಿಲೀನಗೊಳಿಸಿ ಪಿಂಚಣಿ/ಕುಟುಂಬ ಪಿಂಚಣಿ/ನಿವೃತ್ತಿ ಸೌಲಭ್ಯಗಳನ್ನು ಪರಿಷ್ಕರಿಸಿದ ನಂತರದ ಪರಿಷ್ಕೃತ ಪಿಂಚಣಿ/ಕುಟುಂಬ ಪಿಂಚಣಿ ಮೊತ್ತದ ಮೇಲೆ 80 ವರ್ಷ ದಾಟಿದವರಿಗೆ 20%ರಷ್ಟು, 85 ವರ್ಷ ದಾಟಿದವರಿಗೆ 30%ರಷ್ಟು ಮತ್ತು 90 ವರ್ಷ ದಾಟಿದವರಿಗೆ 50%ರಷ್ಟು ಮೂಲ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನ ಹೆಚ್ಚಿಸಲು ಕ್ರಮ ಕೈಗೊಳ್ಳುವುದು. ಈ ರೀತಿ ಹೆಚ್ಚಿಸಲಾದ ಮೊತ್ತವನ್ನು ಪ್ರತ್ಯೇಕ ಅಂಶವಾಗಿ ಮುಂದುವರೆಸುವುದು (Distinct Element). ಇದನ್ನು ಕೆಳಗಿನ ಉದಾಹರಣೆಯಲ್ಲಿ ವಿವರಿಸಿದೆ.

(₹ ಗಳಲ್ಲಿ)

| | | |
|---|---|---|
| **ಹಂತ-1** | | |
| ಅ | ಮೂಲ ಪಿಂಚಣಿ/ಕುಟುಂಬ ಪಿಂಚಣಿ ದಿನಾಂಕ 31.03.2017ಕ್ಕೆ | 10,000 |
| ಆ | 80 ವರ್ಷ ವಯೋಮಿತಿಗನುಗುಣವಾಗಿ ಹೆಚ್ಚಿಸಲಾಗಿರುವ ಶೇಕಡಾವಾರು ಪಿಂಚಣಿ 20% ಪ್ರತ್ಯೇಕ ಅಂಶವಾಗಿ ತೋರಿಸುವುದು (Distinct Element) | 2,000 |
| ಇ | ಕಾಲಾನುಕಾಲಕ್ಕೆ ತುಟ್ಟಿಭತ್ಯೆ ಲೆಕ್ಕಹಾಕುವ ಮೂಲ ಪಿಂಚಣಿ/ಕುಟುಂಬ ಪಿಂಚಣಿ 31.03.2017ಕ್ಕೆ | 12,000 |
| **ಹಂತ-2** | | |
| ಈ | ದಿನಾಂಕ 01.04.2017 ರಿಂದ ಪರಿಷ್ಕೃತ ಮೂಲ ಪಿಂಚಣಿ/ಕುಟುಂಬ ಪಿಂಚಣಿ ಆದೇಶ ಸಂಖ್ಯೆ ಕವಿಪ್ರನಿನಿ/ಬಿ16/69518/2017-18 ದಿನಾಂಕ 09.03.2018ರ ಪ್ರಕಾರ (₹ 10,000+(₹ 10,000x26%)) | 12,600 |
| ಉ | 80 ವರ್ಷ ವಯೋಮಿತಿಗನುಗುಣವಾಗಿ ಹೆಚ್ಚಿಸಲಾಗುವ ಶೇಕಡಾವಾರು ಪಿಂಚಣಿ 20% ಪ್ರತ್ಯೇಕ ಅಂಶವಾಗಿ ತೋರಿಸುವುದು (Distinct Element) (₹ 12,600x 20%) (₹ 2,000/- ಬದಲಿಗೆ ₹ 2,520/-ನ್ನು ಅಧಿಕ ಪಿಂಚಣಿಯಾಗಿ ಪರಿಗಣಿಸುವುದು) | 2,520 |
| ಊ | ಕಾಲಾನುಕಾಲಕ್ಕೆ ತುಟ್ಟಿಭತ್ಯೆ ಲೆಕ್ಕಹಾಕುವ ಮೂಲ ಪಿಂಚಣಿ/ಕುಟುಂಬ ಪಿಂಚಣಿ 01.04.2017ಕ್ಕೆ | 15,120 |

| ಹಂತ-3 | | |
|---|---|---|
| ಋ | ದಿನಾಂಕ 01.07.2017 ರಿಂದ ಪರಿಷ್ಕೃತ ಮೂಲ ಪಿಂಚಣಿ/ ಕುಟುಂಬ ಪಿಂಚಣಿ ಆದೇಶ ಸಂಖ್ಯೆ ಕವಿಪ್ರನಿನಿ/ಬಿ16/69518/2017-18 ದಿನಾಂಕ 29.06.2018ರ ಪ್ರಕಾರ ವಿಲೀನಗೊಳಿಸಬೇಕಾದ ತುಟ್ಟಿಭತ್ಯೆ (12,600x45.25%) | 5,702 |
| ಎ | ಒಟ್ಟು ಪಿಂಚಣಿ/ಕುಟುಂಬ ಪಿಂಚಣಿ (12,600+5,702) | 18,302 |
| ಏ | 80 ವರ್ಷ ವಯೋಮಿತಿಗನುಗುಣವಾಗಿ ಹೆಚ್ಚಿಸಲಾಗುವ ಶೇಕಡಾವಾರು ಪಿಂಚಣಿ 20% ಪ್ರತ್ಯೇಕ ಅಂಶವಾಗಿ ತೋರಿಸುವುದು (Distinct Element) (18,302x20%) (₹ 2,520/- ಬದಲಿಗೆ ₹ 3,660/-ನ್ನು ಅಧಿಕ ಪಿಂಚಣಿಯಾಗಿ ಪರಿಗಣಿಸುವುದು) | 3,660 |
| ಐ | ಒಟ್ಟು ಪಿಂಚಣಿ/ಕುಟುಂಬ ಪಿಂಚಣಿ (18,302+3,660) | 21,962 |
| ಒ | ಕಾಲಾನುಕಾಲಕ್ಕೆ ತುಟ್ಟಿಭತ್ಯೆ ಲೆಕ್ಕಹಾಕುವ ಮೂಲ ಪಿಂಚಣಿ/ಕುಟುಂಬ ಪಿಂಚಣಿ 01.07.2017ಕ್ಕೆ | 21,962 |
| ಹಂತ-4 ಇದೇ ಪಿಂಚಣಿ/ಕುಟುಂಬ ಪಿಂಚಣಿದಾರರು 85 ವರ್ಷ ದಾಟಿದಾಗ | | |
| ಓ | 85 ವರ್ಷ ವಯೋಮಿತಿಗನುಗುಣವಾಗಿ ಹೆಚ್ಚಿಸಲಾಗುವ ಶೇಕಡಾವಾರು ಪಿಂಚಣಿ 30% ಪ್ರತ್ಯೇಕ ಅಂಶವಾಗಿ ತೋರಿಸುವುದು (Distinct Element) (₹ 18,302x 30%) (₹ 3,660/- ಬದಲಿಗೆ ₹ 5,491/-ನ್ನು ಅಧಿಕ ಪಿಂಚಣಿಯಾಗಿ ಪರಿಗಣಿಸುವುದು) | 5,491 |
| ಔ | ಕಾಲಾನುಕಾಲಕ್ಕೆ ತುಟ್ಟಿಭತ್ಯೆ ಲೆಕ್ಕಹಾಕುವ ಮೂಲ ಪಿಂಚಣಿ/ಕುಟುಂಬ ಪಿಂಚಣಿ (18,302+5,491) | 23,793 |
| ಇದೇ ಕ್ರಮದಲ್ಲಿ 90 ವರ್ಷ ದಾಟಿದವರಿಗೆ 50% ರಷ್ಟು ಮೂಲ ನಿವೃತ್ತಿ ವೇತನ ಮತ್ತು ಕುಟುಂಬ ನಿವೃತ್ತಿ ವೇತನ ಹೆಚ್ಚಿಸಲು ಕ್ರಮ ಕೈಗೊಳ್ಳುವುದು. | | |

ಮೇಲಿನಂತೆ, ಪಿಂಚಣಿ/ಕುಟುಂಬ ಪಿಂಚಣಿ ಹೆಚ್ಚಳವನ್ನು ಆಂತರಿಕ ಪರಿಶೋಧನೆಗೆ ಒಳಪಡಿಸಿ ನಿಗದಿಪಡಿಸಲು ಕ್ರಮ ಕೈಗೊಳ್ಳುವುದು. ಪಿಂಚಣಿ/ಕುಟುಂಬ ಪಿಂಚಣಿ ಆದೇಶದ ಎರಡೂ ಭಾಗಗಳಲ್ಲಿ (Pensioner/Office copy) ಸಂಬಂಧಪಟ್ಟ ಅಧಿಕಾರಿಗಳು ಮತ್ತು ಲೆಕ್ಕಪರಿಶೋಧನೆ ಅಧಿಕಾರಿಗಳು ದೃಢೀಕರಿಸಿ, ಮೇಲ್ಮುದ್ರೆ (Enfacement) ಯೊಂದಿಗೆ ನಮೂದಿಸುವುದು.

ಈ ಪ್ರಕಾರ ಪಿಂಚಣಿ/ಕುಟುಂಬ ಪಿಂಚಣಿಯನ್ನು ನಿಗದಿಪಡಿಸಿದ ನಂತರ ಪರಿಷ್ಕೃತ ಪಿಂಚಣಿ/ ಕುಟುಂಬ ಪಿಂಚಣಿಯನ್ನು ಪಿಂಚಣಿ ಸ್ಕೇಲ್ ರಿಜಿಸ್ಟರ್ ಹಾಗೂ Pension Payment Management System ತಂತ್ರಾಂಶದಲ್ಲಿ ನಮೂದಿಸುವುದು.

5. **ದಿನಾಂಕ 01.07.2017ರ ನಂತರ ಪಿಂಚಣಿ/ಕುಟುಂಬ ಪಿಂಚಣಿಯ ಕನಿಷ್ಠ/ಗರಿಷ್ಠ ಮೊತ್ತದ ಸಾರಾಂಶವನ್ನು ಈ ಕೆಳಗಿನಂತೆ ವಿವರಿಸಿದೆ.**

(₹ ಗಳಲ್ಲಿ)

| ಅವಧಿ | ವಿವರ | ಕನಿಷ್ಠ | ಗರಿಷ್ಠ | ಷರಾ |
|---|---|---|---|---|
| 01.04.2017ಕ್ಕಿಂತ ಹಿಂದಿನ ಪಿಂಚಣಿ/ಕುಟುಂಬ ಪಿಂಚಣಿದಾರರು | ಪಿಂಚಣಿ | 8,785 | 73,023 | ದಿನಾಂಕ 01.07.2017 ರಿಂದ ಜಾರಿಗೆ ಬರುವಂತೆ |
| | ಕುಟುಂಬ ಪಿಂಚಣಿ | 8,785 | 43,815 | |
| 01.04.2017ರ ನಂತರದ ಪಿಂಚಣಿ/ಕುಟುಂಬ ಪಿಂಚಣಿದಾರರು | ಪಿಂಚಣಿ | 11,889 | 88,777 | |
| | ಕುಟುಂಬ ಪಿಂಚಣಿ | 11,889 | 53,267 | |

*ಸೂಚನೆ: ಸೇವೆಯಲ್ಲಿರುವಾಗಲೇ ನಿಧನಗೊಂಡ ಅವಲಂಬಿತರ ಕುಟುಂಬ ಪಿಂಚಣಿಯ ಗರಿಷ್ಠ ಮಿತಿಯನ್ನು ಕವಿಮಂ ಸೇವಾ ನಿಬಂಧನೆಗಳನುಸಾರ ನಿಯಂತ್ರಿಸುವುದು.

ಆರ್ಥಿಕ ಸಲಹೆಗಾರರು ಮತ್ತು ವ್ಯವಸ್ಥಾಪಕ ಟ್ರಸ್ಟಿ,
ಕವಿಪ್ರನಿನಿ/ವಿಸಕಂಗಳ ಪಿಂಚಣಿ & ಉಪದಾನ ಟ್ರಸ್ಟ್.

ಪ್ರತಿ ಮಾಹಿತಿಗಾಗಿ ಹಾಗೂ ತಮ್ಮ ವ್ಯಾಪ್ತಿಯ ಪಿಂಚಣಿ ಬಟವಾಡೆ ಲೆಕ್ಕಘಟಕಗಳಿಗೆ ಮೇಲಿನಂತೆ ಸೂಕ್ತ ನಿರ್ದೇಶನ ನೀಡುವಂತೆ ಕೋರಿದೆ:

1. ಆರ್ಥಿಕ ಸಲಹೆಗಾರರು(ಲೆ & ಸಂ), ಕವಿಪ್ರನಿನಿ, ಕಾವೇರಿ ಭವನ.
2. ಮುಖ್ಯ ಪ್ರಧಾನ ವ್ಯವಸ್ಥಾಪಕರು(ಹ & ವಾ), ಬೆವಿಕಂ, ಕೆ.ಆರ್.ವೃತ್ತ, ಬೆಂಗಳೂರು.
3. ಮುಖ್ಯ ಆರ್ಥಿಕ ಅಧಿಕಾರಿ, ಚಾವಿಸನಿ/ಗುವಿಕಂ/ಹುವಿಕಂ/ಮವಿಕಂ.

ಪ್ರತಿ ಸೂಕ್ತ ಕ್ರಮಕ್ಕಾಗಿ:

4. ಅಧೀಕ್ಷಕ ಇಂಜಿನಿಯರ್(ವಿ), ಮಾಹಿತಿ ತಂತ್ರಜ್ಞಾನ, ಗಣಕಯಂತ್ರ ಶಾಖೆ, ಕಾವೇರಿ ಭವನ, ಬೆಂಗಳೂರು-09 ಕೆಇಪಿಜಿಟಿ ವೆಬ್ ತಾಣದಲ್ಲಿ ಪ್ರಕಟಿಸಲು ಕೋರಲಾಗಿದೆ.
5. ಎಲ್ಲಾ ಲೆಕ್ಕಾಧಿಕಾರಿಗಳು, ಕಾರ್ಯ ಮತ್ತು ಪಾಲನಾ ವಿಭಾಗ/ಆಂ.ಪ, ಬೆವಿಕಂ/ಚಾವಿಸನಿ/ಗುವಿಕಂ/ಹುವಿಕಂ/ಮವಿಕಂ.
6. ಲೆಕ್ಕಾಧಿಕಾರಿಗಳು, ಕವಿಪನಿನಿ, ಎಂ.ಆರ್.ಎಸ್.ಶಿವಮೊಗ್ಗ/ವ್ಯವಸ್ಥಾಪಕರು(ನ&ಲೆ), ಕಾವೇರಿ ಭವನ.